**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ**
**ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 35/2017

ಸಿ ಡಬ್ಲುಃ 04

ಪಿ ಡಬ್ಲುಃ 03

| | |
|---|---|
| ಸಾಕ್ಷಿದಾರರ ಹೆಸರು | ಸುಧೀರ ಕಾಂಬಳೆ |
| ತಂದೆಯ ಹೆಸರು | ಶಂಕರ |
| ವಯಸ್ಸು | 40 ವರ್ಷ |
| ಉದ್ಯೋಗ | ಕೃಷಿ, ಕೂಲಿ |
| ವಾಸ್ತವ್ಯ | ನಂದಿಕಟ್ಟಾ, ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **29.01.2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸಿ ಆರ್ ಪಿ ಸಿ ಕಲಂ 299 ರಡಿಯಲ್ಲಿ ಸಾಕ್ಷ್ಯ ವಿಚಾರಣೆಃ**

ದಿನಾಂಕಃ 23.09.2016 ರಂದು ನಾನು ಮತ್ತು ನನ್ನ ಸ್ನೇಹಿತನಾದ ಚಾಸಾ 5 ರವರು ನಮ್ಮ ವೈಯಕ್ತಿಕ ಕೆಲಸ ಮೇರೆಗೆ ಠಾಣೆಗೆ ಹೋಗಿದ್ದು, ಅಲ್ಲಿ ಪೋಲಿಸರು ನಮಗೆ ಒಂದು ಪಂಚನಾಮೆ ಮಾಡುವುದಿದೆ, ಸದರಿ ಪಂಚನಾಮೆಗೆ ಪಂಚರಾಗಬೇಕೆಂದು ಕೋರಿದ್ದು, ನಾವು ಒಪ್ಪಿಕೊಂಡ ಪ್ರಕಾರ ನಮ್ಮನ್ನು ಜೀಪಿನಲ್ಲಿ ಇಂದೂರು ಅಂಚೆ ಕಚೇರಿಗೆ ಕರೆದುಕೊಂಡು ಹೋದರು. ಸ್ಥಳವನ್ನು ಆರೋಪಿ ತೋರಿಸಿರುತ್ತಾನೆ. ಸ್ಥಳದಲ್ಲಿ ಆರೋಪಿಯು ಕಳೆಯಲ್ಲಿದ್ದ ಒಂದು ರಾಡ್ ನ್ನು ತೋರಿಸಿ, ಸದರಿ ರಾಡನಿಂದಲೇ ತಾನು ಬೀಗವನ್ನು ಮೀಟಿದ್ದಾಗಿ ತೋರಿಸಿದನು. ಸ್ಥಳದಲ್ಲಿ ಪಂಚನಾಮೆಯನ್ನು 1.30 ಗಂಟೆಯಿಂದ 2.30 ಗಂಟೆಯವರೆಗೆ ಜರುಗಿಸಿರುತ್ತಾರೆ.

ನ್ಯಾಯಾಲಯದ ಮುಂದಿರುವ ಜಪ್ತು ಪಂಚನಾಮೆಯನ್ನು ನೋಡುತ್ತೇನೆ, ಅದನ್ನು ನಿಪಿ.10 ಎಂದು ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.10 ಎ** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ರಾಡ್ ನ್ನು ನೋಡಿ ಗುರುತಿಸಿದ್ದು, ಸದರಿ ರಾಡ್ ನ್ನು **ಮುದ್ದೆ ಮಾಲು-02** ಎಂದು ಗುರುತಿಸಲಾಯಿತು.

ನಾನು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

SD/-

**ಪ್ರ ದ ನ್ಯಾದಂ ಮುಂಡಗೋಡ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 35/2017

ಸಿ ಡಬ್ಲುಃ 01

ಪಿ ಡಬ್ಲುಃ 02

| | |
|---|---|
| ಸಾಕ್ಷಿದಾರರ ಹೆಸರು | ವಸಂತ ಬೆಳವಂತರ |
| ತಂದೆಯ ಹೆಸರು | ಸಹದೇವ |
| ವಯಸ್ಸು | 36 ವರ್ಷ |
| ಉದ್ಯೋಗ | ಪೋಸ್ಟ ಮ್ಯಾನ್, ಮುಂಡಗೋಡ ಪೋಸ್ಟ ಆಫೀಸ್. |
| ವಾಸ್ತವ್ಯ | ಕೊಪ್ಪ, ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **29.01.2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸಿ ಆರ್ ಪಿ ಸಿ ಕಲಂ 299 ರಡಿಯಲ್ಲಿ ಸಾಕ್ಷ್ಯ ವಿಚಾರಣೆಃ**

ನಾನು 2011 ರಿಂದ 2022 ರವರೆಗೆ ಬ್ರಾಂಚ್ ಪೋಸ್ಟ ಮಾಸ್ಟರ್ ಆಗಿ ಇಂದೂರು ಪೋಸ್ಟ ಆಫೀಸನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 02.04.2016 ಶನಿವಾರದಂದು ಎಂದಿನಂತೆ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಕಚೇರಿಯ ಕೆಲಸ ಮುಗಿದ ನಂತರ, ಬಾಗಿಲು ಹಾಕಿ, ಮನೆಗೆ ಹೋಗಿದ್ದು, ಮರು ದಿನ ಅಂದರೇ ದಿನಾಂಕಃ 03.04.2016, ಭಾನುವಾರದಂದು ರಾತ್ರಿ 9-9.15 ಗಂಟೆಯ ಸುಮಾರಿಗೆ ಪಕ್ಕದ ಮನೆಯವರಾದ ಚಾಸಾ 8 ರವರು ನನಗೆ ಕರೆ ಮಾಡಿ, ಅಂಚೆ ಕಚೇರಿಯ ಬಾಗಿದು ತೆರೆದಿದೆ ಎಂದು ತಿಳಿಸಿದರು. ನಂತರ, ನಾನು ಅಂಚೆ ಕಚೇರಿಗೆ ಬಂದು ನೋಡಿದಾಗ, ಅಂಚೆ ಕಚೇರಿಯ ಬಾಗಿಲು ಬೀಗವನ್ನು ಯಾವುದೋ ಗಟ್ಟಿಯಾದ ವಸ್ತುವಿನಿಂದ ಮೀಟಿ ತೆಗೆದಿದ್ದು ಕಂಡುಬಂದಿದ್ದು, ನಾನು ಒಳಗೆ ಹೋಗಿ ನೋಡಲಾಗಿ ನಾವು ದುಡ್ಡನ್ನು ಇಡುತ್ತಿದ್ದ ಕ್ಯಾಶ್ ಬಾಕ್ಸ ನ್ನು ತೆಗೆದು ಅದರಲ್ಲಿ 1,935/- ರೂಪಾಯಿಗಳು ಯಾರೋ ಕಳ್ಳತನ ಮಾಡಿದ್ದು ಮತ್ತು ಎರಡು ಪಾರ್ಸಲಗಳಲ್ಲಿ ಒಂದನ್ನು ತೆಗೆದುಕೊಂಡು, ಇನ್ನೊಂದರಲ್ಲಿ ಇದ್ದ ಔಷಧಿ ಚೆಲ್ಲಿದ್ದರು, ಅಂಚೆ ಕಚೇರಿಯಲ್ಲಿದ್ದ ವಸ್ತುಗಳು ಚೆಲ್ಲಾಪಿಲ್ಲಿ ಆಗಿದ್ದವು. ಕಳ್ಳತನವಾದ ಪಾರ್ಸಲ್ ಮೌಲ್ಯ ಸುಮಾರು ರೂಪಾಯಿ 2,398/- ಆಗಿರುತ್ತದೆ. ಸದರಿ ವಿಷಯವನ್ನು ನಾನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ್ದು, ಸದರಿಯವರು ದಿನಾಂಕಃ 04.04.2016 ರಂದು ಸ್ಥಳಕ್ಕೆ ಬಂದು ಪರಿಶೀಲಿಸಿ, ಕಳ್ಳತನವಾದ ಬಗ್ಗೆ ಪೋಲಿಸರಲ್ಲಿ ದೂರನ್ನು ದಾಖಲಿಸಬೇಕೆಂದು ನಿರ್ಧರಿಸಿ, ಸದರಿ ದಿನದಂದು ಮಧ್ಯಾಹ್ನ 12.15 ಗಂಟೆಗೆ ದೂರನ್ನು ದಾಖಲು ಮಾಡಿರುತ್ತೇನೆ.

ಅದೇ ದಿನ ಮಧ್ಯಾಹ್ನ 3.30 ಗಂಟೆಗೆ ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ, ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಎರಡು ಬೀಗ ಮತ್ತು ಒಂದು ಚಾವಿಯನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಸ್ಥವನ್ನು ನಾನೇ ತೋರಿಸಿರುತ್ತೇನೆ.

ನ್ಯಾಯಾಲಯದ ಮುಂದಿರುವ ದೂರನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.7** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.7 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.8** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.8 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.9** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.9 ಎ** ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎರಡು ಬೀಗಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ **ಮುದ್ದೆ ಮಾಲು-01** ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**